# ಅನಾಸಕ್ತ ವಿದ್ಯಾರ್ಥಿಯ ಮೇಲೆ ಕಥೆಯ ಪರಿಣಾಮ

ಸೋನಿಯಾ ಖುದಾನ್‌ಪುರ್

ರುದ್ರಪ್ರಯಾಗದ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡುವಾಗ, ಆರಂಭಿಕ ದಿನಗಳಲ್ಲಿ, ಅದುವರೆಗೂ ನಾವು ಚರ್ಚಿಸಿದ್ದ, ಓದಿದ್ದ ಭಾಷಾ ಬೋಧನಾ ವಿಧಾನಗಳನ್ನೇ ಪ್ರಯೋಗ ಮಾಡುತ್ತಿದ್ದೆ. ಇವುಗಳ ಪೈಕಿ, ಕತೆ ಹೇಳುವುದು ಯಶಸ್ವಿ ವಿಧಾನ. ಮಕ್ಕಳಿಗೆ ಕತೆ ಹೇಳುವುದರಿಂದ – ಅವರ ಗಮನ ಸೆಳೆಯುವ, ಪುಸ್ತಕಗಳ ಬಗ್ಗೆ ಒಲವು ಮೂಡಿಸುವ, ಮಾತು ಮತ್ತು ಬರವಣಿಗೆಯ ರೂಪದಲ್ಲಿ ತಮ್ಮ ಆಶಯಗಳನ್ನು ವ್ಯಕ್ತಪಡಿಸಲು ಪ್ರೇರೇಪಿಸುವ ನಿಟ್ಟಿನಲ್ಲಿ ಚಿಕ್ಕದಾದರೂ ನಿರಂತರವಾದ ಧನಾತ್ಮಕ ಫಲಿತಾಂಶವನ್ನು ನಾನು ಗಮನಿಸಿದ್ದೆ.

ನಾನೇನೂ ಕತೆ ಹೇಳುವುದರಲ್ಲಿ ಪ್ರವೀಣೆಯಲ್ಲ. ಹಾಗಾಗಿ, ನಾನೇ ಮೊದಲು ಕತೆಗಳನ್ನು ಓದಿ, ಮನನ ಮಾಡಿಕೊಂಡು ಮಕ್ಕಳಿಗೆ ಹೇಳುವುದು ಮತ್ತು ಅವರನ್ನು ಹೊಸ ಕತೆ ಪುಸ್ತಕಗಳತ್ತ ಸೆಳೆಯುವುದೆಂದು ತೀರ್ಮಾನಿಸಿದೆ. ಕೆಲವು ತಿಂಗಳು ನಾನಿದ್ದ ಶಾಲೆಯೊಂದರಲ್ಲಿ, ದಿನಾಲೂ ಒಂದಷ್ಟು ಕತೆ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದೆ. ಮತ್ತು ಒಂದೋ ಅಥವಾ ಎರಡು ಕತೆಗಳನ್ನು ಓದಿ ಮನನ ಮಾಡಿಕೊಂಡು ಅದನ್ನು ನನ್ನದೇ ಶೈಲಿಯಲ್ಲಿ ಮಕ್ಕಳಿಗೆ ಹೇಳುತ್ತಿದ್ದೆ. ಆ ಶಾಲೆಯಲ್ಲಿ ನಾನು ಕಳೆದ ಸಮಯವು ಮಕ್ಕಳಸ್ನೇಹಿಯಾಗಿ ಮತ್ತು ಕತೆ ಹೇಳುವುದರ ಪರಿಣಾಮವನ್ನು ಗಮನಿಸಲು ಸಾಕಷ್ಟು ನೆರವಾಯಿತು.

ಆರಂಭದ ದಿನಗಳು ಸಾಕಷ್ಟು ಉತ್ತೇಜಕವಾಗಿದ್ದವು. ನಾನು ಏನು ತಂದಿದ್ದೇನೆ ಎಂದು ತಿಳಿದುಕೊಳ್ಳುವ ಕುತೂಹಲ ಮಕ್ಕಳಲ್ಲಿ ಕಂಡುಬಂದಿತು. ತರಗತಿಯ ಮಧ್ಯೆ, ತಮಗೆ ಪುಸ್ತಕ ಕೊಡುವಂತೆ ಕೇಳುತ್ತಿದ್ದರು ಅಥವಾ ನನ್ನ ಬಳಿ ನಿಂತು ಪುಸ್ತಕದ ಮೇಲೆ ಕಣ್ಣಾಡಿಸುತ್ತಿದ್ದರು. ನಾನು ಯಾವ ಹೊಸ ಪುಸ್ತಕ ತಂದಿದ್ದೇನೆ ಎಂಬುದು ಅವರ ನಿತ್ಯದ ಕುತೂಹಲವಾಗಿರುತ್ತಿತ್ತು, ಅವರ ಆಸಕ್ತಿಗೆ ತಕ್ಕಂತೆ ನಾನು ಕತೆ ಹೇಳುತ್ತಿದ್ದೆ, ಇಲ್ಲವೇ ಓದುತ್ತಿದ್ದೆ.

ಬಿಡುವಾದಾಗಲೆಲ್ಲ ಮಕ್ಕಳಿಗೆ ನಾನು ಇಂಥಾ ಕತೆ ಪುಸ್ತಕಗಳ್ನು ಕೊಡುತ್ತಿದ್ದೆ. ಮೊದಮೊದಲು ಮಕ್ಕಳು ಕತೆ ಪುಸ್ತಕದ ಆಚೆಈಚೆ ತಿರುಗಿ ನೋಡಿ, ಪುಟಗಳನ್ನು ತಿರುವಿ, ಚಿತ್ರಗಳನ್ನು ನೋಡಿ ತಕ್ಷಣ ವಾಪಾಸು ಕೊಟ್ಟುಬಿಡುತ್ತಿದ್ದರು. ಕೆಲವರಷ್ಟೇ ಓದುವ ಪ್ರಯತ್ನ ಮಾಡುತ್ತಿದ್ದರು. ಅದು ಚೆನ್ನಾಗಿದೆ ಎಂದು ಭಾವಿಸಿದರೆ ತಕ್ಷಣ ಪುಸ್ತಕದ ಶೀರ್ಷಿಕೆಯನ್ನಾದರೂ ಓದತೊಡಗುತ್ತಿದ್ದರು. ಇನ್ನು ಕೆಲವರು, ಪುಸ್ತಕ ಚೆನ್ನಾಗಿಲ್ಲ ಎಂದುಕೊಂಡರೆ –ಚಿತ್ರಗಳನ್ನಷ್ಟೇ ನೋಡಿ ಪುಟಗಳನ್ನು ತಿರುವಿ ಹಾಕಿ, ಒಮ್ಮೊಮ್ಮೆ "ನಾನು ಓದಲಾರೆ' ಎಂದು ಹೇಳಿ, ವಾಪಾಸು ಕೊಡುತ್ತಿದ್ದರು. ಅಕ್ಷರಮಾಲೆ, ಅಕ್ಷರಗಳ ಧ್ವನಿ, ಶಾಲಾ ಜೀವನದ ನಿತ್ಯ ಚಟುವಟಿಕೆಯಂತೆ ಓದು ಮತ್ತು ಬರಹವನ್ನು ತಿಳಿದುಕೊಂಡ ಹೊರತಾಗಿಯೂ ಈ ಮಾತನ್ನು ಅವರು ಹೇಳುತ್ತಿದ್ದರು. ಅವರನ್ನು ಉತ್ತೇಜಿಸಿದ್ದು ಆರಂಭದಲ್ಲಿ ಸ್ವಲ್ಪ ಪರಿಣಾಮ ಬೀರಿತು. ಆದರೆ ಕೆಲವು ವಾರ ಕಳೆಯುತ್ತಿದ್ದಂತೆ ಏನಾಯಿತೆಂದರೆ, ಆತ್ಮವಿಶ್ವಾಸ ಇಲ್ಲದ ವಿದ್ಯಾರ್ಥಿಗಳೂ ಇನ್ನಷ್ಟು ಕತೆಗಳನ್ನು ಕೇಳತೊಡಗಿದರು.

ಎರಡನೇ ತರಗತಿಯ ಅಮಾನ್‌ನನ್ನು ತಂಟೆಕೋರ ಮತ್ತು ಕಲಿಕೆಯಲ್ಲಿ ಆಸಕ್ತಿ ಇಲ್ಲದ ಹುಡುಗನೆಂದೇ ಪರಿಗಣಿಸಲಾಗಿತ್ತು. ಅವನು ಕರಿಹಲಗೆಯಿಂದ ಅಥವಾ ಸಹಪಾಠಿಗಳ ಪುಸ್ತಕದಿಂದ ಕೇವಲ ನಕಲು ಮಾಡಬಲ್ಲ ಎಂದೇ ಅವನ ಶಿಕ್ಷಕಿ ತೀರ್ಮಾನಿಸಿಬಿಟ್ಟಿದ್ದರು. ಅವನು ಮನೆಗೆಲಸ ಮಾಡಿದ್ದೇ ಅಪರೂಪ. ತರಗತಿಯಲ್ಲಿ ಆಸಕ್ತಿಯಿಂದ ಇದ್ದುದೇ ಇಲ್ಲ. ಒಂದೋ ಅವನು ಚಡಪಡಿಸುತ್ತಿದ್ದ ಇಲ್ಲವೇ ತಂಟೆ ಮಾಡಿಕೊಂಡಿರುತ್ತಿದ್ದ. ನಾನು ಶಾಲೆಗೆ ತೆಗೆದುಕೊಂಡು ಹೋಗುತ್ತಿದ್ದ ಪುಸ್ತಕಗಳತ್ತ ಕಣ್ಣುಹಾಯಿಸಲೂ ಅವನು ಆಸಕ್ತಿ ತೋರಿಸುತ್ತಿರಲಿಲ್ಲ. ಬೇರೆ ವಿದ್ಯಾರ್ಥಿ ಓದುತ್ತಿದ್ದರೆ ಅವನತ್ತ ಇಣುಕಿ ನೋಡುತ್ತಿದ್ದ, ಇಲ್ಲವೇ ಏನಾದರೂ ಹಾಸ್ಯ ಮಾಡಿ ತನ್ನ ಜಾಗಕ್ಕೆ ಮರಳುತ್ತಿದ್ದ. ಅವನ ಪಾಡಿಗೆ ಓದುವಂತೆ ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿದ್ದವು. ನಾನು ಕತೆ ಹೇಳುವಾಗಲೂ ಕುಳಿತು ಕೇಳಿಸಿಕೊಳ್ಳುವ ತಾಳ್ಮೆ ಅವನಿಗೆ ಇರಲಿಲ್ಲ. ಅಲ್ಲಿ ಇಲ್ಲಿ ಓಡಾಡಲು, ಆಟವಾಡಲು ಅಥವಾ ಬೇರೆಯವರೊಂದಿಗೆ ಜಗಳವಾಡಲು ಬಯಸುತ್ತಿದ್ದ.

ಆದರೆ ಕತೆಯೊಳಗೆ ಏನೋ ಅವನನ್ನು ಸೆಳೆಯುತ್ತಿತ್ತು. ಆರಂಭದ ಕತೆ ಹೇಳುವ ಅವಧಿಯಲ್ಲಿ, ಅಮಾನ್ ನನ್ನ ಪಕ್ಕದಲ್ಲೇ ನಿಂತು–ಕೊಂಡು ಕೆಲವು ನಿಮಿಷ ಕೇಳಿಸಿಕೊಂಡು ನಾನು ಹೇಳಿದ ಧಾಟಿಯಲ್ಲೇ ಒಂದು ಸಾಲು ಹೇಳಿ ಗುಂಪಿನಿಂದ ದೂರವಾಗುತ್ತಿದ್ದ. ಸಾಕಷ್ಟು ಬಾರಿ ಅವನು ಹೀಗೆಯೇ ಮಾಡಿದ. ಆಮೇಲೆ ಅದು ಕಡಿಮೆಯಾಯಿತು. ನಾನು ಹೇಳುವ ಕತೆಯಲ್ಲಿನ ಆಸಕ್ತಿಯ ಅಂಶವನ್ನೋ ಸಾಲನ್ನೋ ತಾನೇ ಹೇಳುತ್ತಿದ್ದುದಷ್ಟೇ ಅಲ್ಲ ಮುಂದುವರಿಸಿ ಎನ್ನುವಂತೆ, 'ಫಿರ್?' (ಆಮೇಲೆ), 'ಫಿರ್ ಸೆ', 'ಫಿರ್ ಸೆ' (ಮತ್ತೊಮ್ಮೆ) ಎಂದು ಹೇಳುತ್ತಿದ್ದ. ಅದೇ ಕತೆಯನ್ನು ಮತ್ತೆ ಹೇಳಬೇಕು ಅಥವಾ ನಾನು ಹೊಸ ಕತೆ ಹೇಳಲಿ ಎಂದು ಆತ ಬಯಸುತ್ತಿದ್ದ.

ಈ ಬದಲಾವಣೆ ಉತ್ತೇಜಕರವಾಗಿತ್ತು. ಒಮ್ಮೆ, 'ನಿನಗೋಸ್ಕರ ನಾನೊಂದು ಕತೆ ಓದಲೇ' ಎಂದು ಅವನನ್ನು ಕೇಳಿದೆ. ತಕ್ಷಣ 'ಸರಿ' ಎಂದು ಉತ್ತರಿಸಿದ. 'ನನಗೆ ಓದಲು ಕಪಾಟಿನಿಂದ ನೀನೇ ಕೆಲವು ಕತೆ ಪುಸ್ತಕಗಳನ್ನು ಆರಿಸಿ ತರುವೆಯಾ? ಇವುಗಳ ಪೈಕಿ ನಾನು ಯಾವುದನ್ನು ಓದಲಿ?' ಎಂದೆ.

ಒಮ್ಮೆ ಅಮಾನ್, 'ರಫ್ತಾರ್ ಖಾನ್ ಕಾ ಸ್ಕೂಟರ್' ಓದುವಂತೆ ಕೇಳಿದ. ಆದರೆ ನಾನು ಅದನ್ನು ಮುಂಚೆ ಓದಿಲ್ಲವಾದ ಕಾರಣ ಸ್ವಲ್ಪ ಗಲಿಬಿಲಿಗೊಂಡಿದ್ದೆ. ಹಾಗಾಗಿ ನಾನು ಬೆರಳುಗಳ ನೆರವಿನಿಂದ ಪದಗಳನ್ನು ನೆನಪಿಟ್ಟುಕೊಂಡೆ ಮತ್ತು ಧ್ವನಿಯನ್ನು ಏರಿಳಿತ ಮಾಡಿಕೊಂಡು, ಹಾವಭಾವದ ಮೂಲಕ ಕತೆ ಹೇಳಿದೆ. ಇಷ್ಟವಾದ ಒಂದು ಸಾಲನ್ನು ಆತ ಮಂದ ಸ್ವರದಲ್ಲಿ ಹೇಳುತ್ತಿದ್ದ. ನಾನು ಹೇಳಿದ ತಕ್ಷಣ ಒಮ್ಮೆ ಹೇಳಿದರೆ ಮತ್ತೊಮ್ಮೆ ನನ್ನ ಜೊತೆಗೇ ಹೇಳುತ್ತಿದ್ದ.

ಅವನು ಸಾಲುಗಳ ಮೇಲೆ ಗಮನವಿರಿಸಿದ್ದ. ಅಕಸ್ಮಾತ್ ನಾನು ಯಾವುದಾದರೂ ಪದ ಅಥವಾ ಪುಟವನ್ನು ಮರೆತರೆ ಅವನೇ ನನಗೆ ನೆನಪಿಸುತ್ತಿದ್ದ. ಅವನ ಈ ಪಾಲ್ಗೊಳ್ಳುವಿಕೆಯಿಂದ ನಾನು ಪುಳಕಿತಳಾಗಿದ್ದೆ.

ಇದಾದ ಬಳಿಕ, ಮಕ್ಕಳಿಗೆ ಕತೆ ಪುಸ್ತಕವನ್ನು ನೋಡಲು, ಮುಟ್ಟಲು ಸಾಧ್ಯವಾಗುವಂತೆ ನಾನೂ ಅವರಷ್ಟೇ ಎತ್ತರದಲ್ಲಿ ಕುಳಿತು–ಕೊಳ್ಳತೊಡಗಿದೆ. ನಾನು ಈ ಕತೆಯನ್ನು ಏನಿಲ್ಲವೆಂದರೂ ಆರೇಳು ಬಾರಿ ಓದುವಂತೆ ಅಮಾನ್ ಮಾಡಿದ. ಅವನಿಗೆ ಹೆಚ್ಚಿನ ಸಾಲುಗಳು ಬಾಯಿಪಾಠವಾಗಿತ್ತು. ಅವನು ಇನ್ನಷ್ಟು ಪುಸ್ತಕಗಳನ್ನು ಆಯ್ಕೆ ಮಾಡಲು ಶುರುಮಾಡಿದ, ಅಷ್ಟೇ ಅಲ್ಲದೆ ಅವನಿಗೆ ಯಾವ ಬಗೆಯ ಕತೆ ಹೇಳಬೇಕು ಎಂದು ನನ್ನಲ್ಲಿ ಹೇಳಿಕೊಳ್ಳತೊಡಗಿದ.

ಒಂದು ಕತೆ ಓದಿದ ತಕ್ಷಣ, ಅವನಿಗೆ ಓದಲು ನೆರವಾಗಲೆಂಬ ಉದ್ದೇಶದಿಂದ, 'ನಾವು ಈ ಕತೆಯನ್ನು ಪುಸ್ತಕದಲ್ಲಿ ಬರೆಯೋಣವೇ?' ಎಂದು ಮಕ್ಕಳನ್ನು ಕೇಳುತ್ತಿದ್ದೆ. ಅವರೆಲ್ಲರೂ ಒಕ್ಕೊರಲಿನಿಂದ ಒಪ್ಪಿದರು. ನಾನು ಬೋರ್ಡಿನಲ್ಲಿ ಬರೆಯ–ತೊಡಗಿದೆ. ಆಗ ಒಬ್ಬ ವಿದ್ಯಾರ್ಥಿನಿ, ಬೋರ್ಡಿನಲ್ಲಿ ನಾನು ಬರೆಯಲೇ ಎಂದು ಕೇಳಿದಳು. ನಂತರ ಅಮಾನ್ ಕೂಡಾ ಬರೆಯುವುದಾಗಿ ಹೇಳಿದ. ನಾನು ಇಬ್ಬರಿಗೂ ಒಪ್ಪಿಗೆ ನೀಡಿದೆ. ಈಗ, ಅಮಾನ್ ಒಂದು ಕೈಯಲ್ಲಿ ಚಾಕ್‌ಪೀಸ್ ಹಾಗೂ ಇನ್ನೊಂದು ಕೈಯಲ್ಲಿ ಪುಸ್ತಕ ಹಿಡಿದು ಸ್ಫುಟವಾಗಿ ಬರೆಯತೊಡಗಿದ. ಸ್ಪಷ್ಟವಾಗಿ ಬರೆದು, ಏನು ಬರೆದಿದ್ದಾನೆ ಎಂದು ತನ್ನ ಸಹಪಾಠಿಗಳಿಗೆ ಓದಿಹೇಳುತ್ತಿದ್ದ.

ಇದಾದ ಬಳಿಕ, ಅಮಾನ್ ಓದಲು ಮತ್ತು ಬರೆಯಲು ತೋರಿದ ಆಸಕ್ತಿ ಬಗ್ಗೆ ಅವನ ಶಿಕ್ಷಕಿಯ ಜೊತೆಗೆ ಮಾತನಾಡಿದೆ. ಆದರೆ ಆಕೆಯ ಮೇಲೆ ಅದು ಪರಿಣಾಮ ಬೀರಿದಂತೆ ತೋರಲಿಲ್ಲ. ಪಾಠದ ಮೇಲೆ ತಾನು ಕೇಳುವ ಪ್ರಶ್ನೆಗೆ ಅವನು ಏನು ಉತ್ತರ ಕೊಡುತ್ತಾನೆ ಮತ್ತು ಪರೀಕ್ಷೆಯಲ್ಲಿ ಎಷ್ಟು ಅಂಕ ಪಡೆಯುತ್ತಾನೆ ಎಂಬ ಸಿದ್ಧಮಾದರಿಯ ಮೇಲಷ್ಟೇ ಆಕೆ ಅವನನ್ನು ಅಳೆಯುತ್ತಿದ್ದರು. ಅಮಾನ್ ಅದನ್ನೆಲ್ಲ ಮಾಡುತ್ತಿರಲಿಲ್ಲ. ಆದರೆ, ಆಸಕ್ತಿ ಇದ್ದಾಗಲೆಲ್ಲ ಅಮಾನ್ ತನ್ನ ಕೆಲಸಗಳನ್ನು ಚೆನ್ನಾಗಿ ಮಾಡಿರುವುದಾಗಿ ಆ ಶಿಕ್ಷಕಿ ಹೇಳಿದರು. ಮುಂದೊಂದು ದಿನ ಭೇಟಿಯಾದಾಗ, ಅಮಾನ್ ಓದಿನಲ್ಲಿ ಸುಧಾರಿಸಿರುವುದಾಗಿ ತಿಳಿಸಿದರು. ಅದರಿಂದ, ಅಮಾನ್‌ನನ್ನು ಆಕೆ ಬೇರೆಯೇ ದೃಷ್ಟಿಕೋನದಿಂದ ನೋಡುತ್ತಿದ್ದಾರೆ ಎಂದು ತೋರಿತು. ಅಂದರೆ, ಒಂದು ರೀತಿಯ ಸಹಾನುಭೂತಿ ಮತ್ತು ಅವನು ಇನ್ನೂ ಚೆನ್ನಾಗಿ ಮಾಡಬಲ್ಲ ಎಂಬ ವಿಶ್ವಾಸ ಕಾಣಿಸಿತು. ಅವನಿಗೆ ಓದಲು ಮತ್ತು ಬರೆಯುವುದನ್ನು ಕಲಿಸಲು ತಾನು ತಿಂಗಳುಗಟ್ಟಲೆ ಪ್ರಯತ್ನಿಸಿದ್ದಾಗಿ ಆ ಶಿಕ್ಷಕಿ ಹೇಳಿದರು. ಅವನು ಪ್ರಗತಿ ಸಾಧಿಸುತ್ತಾನೆ ಎಂಬ ನಿರೀಕ್ಷೆಯೊಂದಿಗೆ ಅವನಿಗೆ ಅಕ್ಷರ, ಶಬ್ದ ಮತ್ತು ವಾಕ್ಯಗಳನ್ನು ಬರೆಸಲು ಲೆಕ್ಕವಿಲ್ಲದಷ್ಟು ಬಾರಿ ಯತ್ನಿಸಿದ್ದರಂತೆ. ಅವನಲ್ಲೂ ಅಲ್ಪಸ್ವಲ್ಪ ಪ್ರಗತಿ ಕಾಣುತ್ತಿದೆ ಎಂದುಕೊಳ್ಳುವಷ್ಟರಲ್ಲಿ ಮತ್ತೆ ಎಲ್ಲಿದ್ದನೋ ಅಲ್ಲೇ ಉಳಿಯುತ್ತಿದ್ದನಂತೆ.

ಒಬ್ಬ ವಿದ್ಯಾರ್ಥಿಯ ಸಾಮರ್ಥ್ಯವು, ಅವನ ಬಗ್ಗೆ ಶಿಕ್ಷಕರು ಏನು ತೀರ್ಮಾನಿಸುತ್ತಾರೋ ಹಾಗೇ ನಿರ್ಧಾರವಾಗುತ್ತದೆ ಎಂಬ ಅಂಶ ಸರ್ಕಾರಿ ಶಾಲೆಯ ತರಗತಿಗಳಲ್ಲಿ ನಾನು ಕಳೆದ ಅಲ್ಪಾವಧಿಯಲ್ಲಿ ಸ್ಪಷ್ಟವಾಯಿತು. ಒಂದು ವೇಳೆ ನನ್ನ ಶಿಕ್ಷಕರು ನಾನು ತಂಟೆಕೋರ, ಗಮನ ಕೊಡದೆ ಅಲಕ್ಷಿಸುವ ಮಗು ಎಂದು ಭಾವಿಸಿದರೆ ಅಥವಾ ಅಚ್ಚುಕಟ್ಟಾಗಿ ನನ್ನ ಕೆಲಸ ಮಾಡುವವಳು ಎಂದು ತೀರ್ಮಾನಿಸಿದರೆ ನಾನು ಅದೇ ಆಗಿರುತ್ತೇನೆ. ಪ್ರತಿ ತರಗತಿಯಲ್ಲೂ, ವಿದ್ಯಾರ್ಥಿಗಳ ಮೇಲಿನ ಆರಂಭಿಕ ಅಭಿಪ್ರಾಯಕ್ಕೆ ತಕ್ಕಂತೆ ಶಿಕ್ಷಕರು ಅವರನ್ನು ವರ್ಗೀಕರಿಸುತ್ತಿದ್ದರು. ಅಲ್ಲಿಯೂ ಒಳ್ಳೆಯವರು, ಸಾಮರ್ಥ್ಯವುಳ್ಳವರು ಮತ್ತು ಯಾವುದೇ ನೆರವಿನ ಅಗತ್ಯವಿಲ್ಲದವರು ಇದ್ದಾರೆ. ಅಮಾನ್, ದುರದೃಷ್ಟವಶಾತ್ ಕೊನೆಯ ವರ್ಗಕ್ಕೆ ಸೇರಿದ್ದ. ಆದರೆ ಕಥೆ ಹೇಳುವುದು ಆ ನಂಬಿಕೆಯನ್ನು ಮುರಿಯಲು ನೆರವಾಗಿತ್ತು. ಅಮಾನ್, ಕತೆ ಕೇಳುವ ಮೂಲಕ ಪುಸ್ತಕದತ್ತ ಕಣ್ಣು ಹಾಯಿಸಲು, ಹೆಚ್ಚು ಹೆಚ್ಚು ಕತೆಗಳನ್ನು ಕೇಳುತ್ತಲೇ ಅವುಗಳನ್ನು ತಾನೇ ಹೇಳಲು, ಪಾತ್ರಗಳು ಮತ್ತು ಸಂಭಾಷಣೆಗಳ ಬಗ್ಗೆ ಮಾತನಾಡಲು ಮತ್ತು ತನ್ನ ಪಾಡಿಗೆ ಓದಲೂ ಶಕ್ತನಾಗಿದ್ದ.

ಎಲ್ಲಾ ಮಕ್ಕಳು ಕಲಿಯಬಲ್ಲರು ಎಂಬುದು ಈ ಅನುಭವದಿಂದ ಸಾಬೀತಾಯಿತು. ಪ್ರತಿಯೊಬ್ಬ ಮಗುವಿಗೂ ವೈಯಕ್ತಿಕ ಗಮನ ನೀಡಿದರೆ ಅವನು ಅಥವಾ ಅವಳೂ ಕಲಿಯಬಲ್ಲರು ಎಂಬುದನ್ನು ಅಮಾನ್ ತೋರಿಸಿಕೊಟ್ಟ. ಪ್ರತಿಯೊಬ್ಬರಿಗೂ ತಾನು ಚೆನ್ನಾಗಿ ಮಾಡಬೇಕು ಎಂಬ ಇಚ್ಛೆಯಿರುತ್ತದೆ. ಅವರೆಲ್ಲರಿಗೂ ನಮ್ಮ ಪ್ರೋತ್ಸಾಹದ ಅಗತ್ಯವಿದೆ ಮತ್ತು ನಾವು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕಾಗಿದೆ. ಖಂಡಿತವಾಗಿಯೂ, ತರಗತಿಗಳಲ್ಲಿ, ಶಿಕ್ಷಕರಿಂದಲೂ ನಮ್ಮ ದಿನನಿತ್ಯದ ಅನುಭವದಿಂದಲೂ ಕತೆ ಹೇಳುವ ಖಚಿತ ಮಾರ್ಗದ ಮೂಲಕ ಇದನ್ನು ಸಾಧಿಸಬಹುದಾಗಿದೆ. ಕತೆ ಹೇಳುವುದು ಮತ್ತು ಓದುವುದು ಅಥವಾ ಅಧ್ಯಾಪಕರು ಪ್ರತಿದಿನದ ಅನುಭವದ ಕತೆಗಳನ್ನು ಹೇಳುವುದು, ಮಕ್ಕಳಿಗೆ ಅವರ ಇಷ್ಟದ ಕತೆ ಪುಸ್ತಕಗಳನ್ನು ಆರಿಸಿಕೊಳ್ಳಲು ಬಿಡುವುದು – ಈ ಮೂಲಕ ಅಧ್ಯಾಪಕರು ಮಕ್ಕಳಿಗೆ ಹತ್ತಿರವಾಗುವ ಅವಕಾಶವನ್ನು ತಮ್ಮದಾಗಿಸಿಕೊಳ್ಳಬಹುದು. ಸೂಕ್ತ ಸಂವಾದಕ್ಕೆ, ಪ್ರಶ್ನೆಗಳಿಗೆ, ಸಂಶಯ ವ್ಯಕ್ತಪಡಿಸಿಕೊಳ್ಳಲು, ಹೆದರಿಕೆ ಮತ್ತಿತರ ಭಾವನೆಗಳಿಗೆ ಹಾಗೂ ಕಲ್ಪನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದಕ್ಕೆ ಕತೆಗಳು ಅವಕಾಶ ಕಲ್ಪಿಸುತ್ತವೆ.



**ಸೋನಿಯಾ ಖುದಾನ್‌ಪುರ್** ಉತ್ತರಾಖಂಡದ ರುದ್ರಪ್ರಯಾಗದವರು. ಅವರು 2018ರಿಂದಲೂ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಇಂಗ್ಲಿಷ್ ಭಾಷಾ ತಂಡದ ಭಾಗವಾಗಿದ್ದಾರೆ. ಪ್ರತಿಷ್ಠಾನಕ್ಕೆ ಸೇರುವುದಕ್ಕೂ ಮೊದಲು ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದರು. ಪತ್ರಿಕೋದ್ಯಮದಲ್ಲಿಯೂ ಸ್ನಾತಕೋತ್ತರ ಡಿಪ್ಲೊಮಾ ಪಡೆದಿದ್ದು, ಮಾಧ್ಯಮದಲ್ಲಿ ಮೂರು ವರ್ಷ ಸೇವೆಯನ್ನೂ ಸಲ್ಲಿಸಿದ್ದಾರೆ. ಅವರು ಪ್ರತಿಷ್ಠಾನದ ಮೂಲಕ ಸರ್ಕಾರಿ ಶಾಲೆಗಳಲ್ಲಿ ಕತೆ ಹೇಳುವ ಮೂಲಕ ಮಕ್ಕಳೊಂದಿಗೆ ಸಂವಾದ ಏರ್ಪಡಿಸುತ್ತಲೇ ಬೋಧನೆ– ಕಲಿಕೆಯನ್ನು ಸಾಧಿಸುವುದು, ಶಿಕ್ಷಕರೊಂದಿಗೆ ಕೆಲಸ ಮಾಡುವುದು ಮತ್ತು ಅವರಿಗೆ ಭಾಷಾ ಕಲಿಕೆ ಸಂಬಂಧ ಕಾರ್ಯಾಗಾರ ಹಾಗೂ ಗೋಷ್ಠಿಗಳನ್ನು ಆಯೋಜಿಸುತ್ತಾರೆ. 2018ರಿಂದ ಈವರೆಗೆ ಅವರು 25ಕ್ಕೂ ಹೆಚ್ಚು ಶಾಲೆಗಳಿಗೆ ಭೇಟಿ ನೀಡಿದ್ದಾರೆ. ಅವರನ್ನು ಇಲ್ಲಿ ಸಂಪರ್ಕಿಸಬಹುದು sonia.khudanpur@azimpremjifoundation.org

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**